## ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು

# ಹಣ್ಣುಗಳ ಉತ್ಸವ ಹಾಗೂ ಹಲಸು ಮೇಳ-2023

## ಮೌಲ್ಯವರ್ಧಿತ ಹಣ್ಣುಗಳ ಹಾಗೂ ಹಲಸು ಪ್ರದರ್ಶನ ಮತ್ತು ಮಾರಾಟ

**24–25 ಜೂನ್, 2023**

# ವರದಿ

ಹಣ್ಣುಗಳ ಉತ್ಸವ ಹಾಗೂ ಹಲಸು ಮೇಳ–2023 ಅನ್ನು ದಿನಾಂಕ: 24 ಮತ್ತು 25ನೇ ಜೂನ್ 2023ರಂದು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಅರ್ಬನ್ ಹಾಥ್‌ನ ಮಳಿಗೆಗಳ ಸಂಕೀರ್ಣದಲ್ಲಿ ಆಯೋಜಿಸಲಾಗಿತ್ತು. ಈ ಎರಡು ದಿನಗಳ ಹಣ್ಣುಗಳ ಉತ್ಸವ ಹಾಗೂ ಹಲಸು ಮೇಳವನ್ನು ಮೂಡಬಿದಿರೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಉಮಾನಾಥ ಕೋಟ್ಯಾನ್ ಇವರು ಉದ್ಘಾಟಿಸಿದರು. ಮೂಡುಶೆಡ್ಡೆ ಗ್ರಾಪಂ ಅಧ್ಯಕ್ಷರಾದ ಶ್ರೀಮತಿ ಜಯಶ್ರೀ, ಉಪಾಧ್ಯಕ್ಷರಾದ ಶ್ರೀ ಅನಿಲ್ ಕುಮಾರ್, ಸದಸ್ಯ ಶ್ರೀ ಸುನೀಲ್, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಶ್ರೀ ಅಭಿಷೇಕ್, ವಿ., ಪಿಲಿಕುಳ ಆಡಳಿತಾಧಿಕಾರಿ ಶ್ರೀ ಮನೀಶ್ ನಾಯ್ಕ, ಪ್ರಾಧಿಕಾರ ಸಮಿತಿ ಸದಸ್ಯರಾದ ಶ್ರೀ ಹರೀಶ್ ಕೆ., ವಿಜ್ಞಾನ ಕೇಂದ್ರದ ನಿರ್ದೇಶಕ ಡಾ. ಕೆ. ವಿ. ರಾವ್, ಬಾಟನಿಕಲ್ ವಿಭಾಗದ ಪ್ರಧಾನ ವಿಜ್ಞಾನಿ ಡಾ. ಸೂರ್ಯಪ್ರಕಾಶ್ ಶೆಣೈ, ಪಿಲಿಕುಳ ಸಂಸ್ಕೃತಿ ಗ್ರಾಮದ ಯೋಜನಾಧಿಕಾರಿ ಡಾ. ನಿತಿನ್, ಮತ್ತಿತರರು ಉಪಸ್ಥಿತರಿದ್ದರು. ಶ್ರೀ ರಾಮಕೃಷ್ಣ ಮರಾಟಿ ಕಾರ್ಯಕ್ರಮ ನಿರ್ವಹಿಸಿದರು.

ಮೇಳದಲ್ಲಿ ಪ್ರಮುಖ ಆಕರ್ಷಣೆಯಾದ ಹಲಸು, ರಾಸಾಯನಿಕ ರಹಿತ ಮಾವು, ರಾಂಬುಟಾನ್ ಮುಂತಾದ ಹಣ್ಣುಗಳು; ಹಲಸಿನ ಮೌಲ್ಯವರ್ಧಿತ ಉತ್ಪನ್ನಗಳಾದ ಹೋಳಿಗೆ, ಹಪ್ಪಳ, ಚಿಪ್ಸ್, ಸೋಂಟೆ ಜೊತೆಗೆ ಹಲಸಿನ ಖಾದ್ಯಗಳಾದ ಪಾಯಸ, ಕಬಾಬ್, ಮಂಚೂರಿ, ಐಸ್ ಕ್ರೀಮ್ ಮುಂತಾದವುಗಳು ಜನಮನ ಸೆಳೆದವು. ದೂರದ ಕೋಲಾರ, ಚಿಕ್ಕಬಳ್ಳಾಪುರ, ಸಖರಾಯಪಟ್ಟಣ ಮುಂತಾದ ಕಡೆಗಳಿಂದ ರೈತರು/ಉತ್ಪಾದಕರು ಈ ಮೇಳದಲ್ಲಿ ಭಾಗಹಿಸಿದ್ದರು. ಹಣ್ಣು, ಹಣ್ಣಿನ ಗಿಡಗಳು ಮತ್ತು ಇತರ ಗೃಹೋಪಯೋಗಿ ವಸ್ತುಗಳು ಸೇರಿ ಒಟ್ಟು 100ಕ್ಕಿಂತಲೂ ಸ್ಟಾಲುಗಳು ಮೇಳದಲ್ಲಿ ಪಾಲ್ಗೊಂಡಿವೆ. ಎರಡು ದಿನದಲ್ಲಿ ಅಂದಾಜು 15,000 ಜನ ಈ ಮೇಳಕ್ಕೆ ಭೇಟಿ ನೀಡಿರುತ್ತಾರೆ.




ಮೇಳದ ಪ್ರವೇಶದ್ವಾರ



ಹೂ ಮತ್ತು ಹಣ್ಣುಗಳಿಂದ ನಿರ್ಮಿತ ದೋಣಿ



ಶಾಸಕರಿಂದ ಹಣ್ಣುಗಳ ಉತ್ಸವದ ಉದ್ಘಾಟನೆ



ಶಾಸಕರಿಂದ ಹಲಸು ಮೇಳಕ್ಕೆ ಚಾಲನೆ






ಅತಿಥಿಗಳಿಂದ ವಿವಿಧ ಮಳಿಗೆಗಳ ಭೇಟಿ



ವಿವಿಧ ಹಣ್ಣುಗಳ ಪ್ರದರ್ಶನ ಮತ್ತು ಮಾರಾಟ



ಮಳಿಗೆಗಳಲ್ಲಿ ಖರೀದಿ ಮಾಡುತ್ತಿರುವ ಗ್ರಾಹಕರು

## ಹಣ್ಣುಗಳ ಮೌಲ್ಯವರ್ಧಿತ ಉತ್ಪನ್ನ ಪ್ರದರ್ಶನ, ಮಾರಾಟ

# ಪಿಲಿಕುಳ ಅರ್ಬನ್ ಹಾಥ್‌ನಲ್ಲಿ ಹಲಸಿನ ಘಮ

■ ವಿಜಯವಾಣಿ ಸುದ್ದಿಜಾಲ ಗುರುಪುರ

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಪಿಲಿಕುಳದ ಅರ್ಬನ್ ಹಾಥ್‌ನಲ್ಲಿ ಎರಡು ದಿನಗಳ ಹಣ್ಣುಗಳ ಉತ್ಸವ ಹಾಗೂ ಹಲಸು ಮೇಳ-2023ವನ್ನು ಶಾಸಕ ಉಮಾನಾಥ ಕೋಟ್ಯಾನ್ ಶನಿವಾರ ಉದ್ಘಾಟಿಸಿದರು.

ಮೂಡುಶೆಡ್ಡೆ ಗ್ರಾಪಂ ಅಧ್ಯಕ್ಷೆ ಜಯಶ್ರೀ, ಉಪಾಧ್ಯಕ್ಷ ಅನಿಲ್‌ಕುಮಾರ್, ಸದಸ್ಯ ಸುನೀಲ್, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಅಭಿಷೇಕ್ ವಿ., ಪಿಲಿಕುಳ ಆಡಳಿತಾಧಿಕಾರಿ ಮನೀಶ್ ನಾಯ್ಕ್, ಬಾಟನಿಕಲ್ ವಿಭಾಗದ ಅಧಿಕಾರಿ ಡಾ.ಸೂರ್ಯಪ್ರಕಾಶ್ ಶೆಣೈ, ಡಾ.ಪ್ರಸನ್ನ ರೈ, ವಿಜ್ಞಾನ ಕೇಂದ್ರದ ಅಧಿಕಾರಿ ಡಾ.ಕೆ.ವಿ.ರಾವ್, ಪಿಲಿಕುಳ ಸಂಸ್ಕೃತಿ ಗ್ರಾಮದ ಯೋಜನಾಧಿಕಾರಿ ಡಾ.ನಿತಿನ್, ಸ್ಥಳೀಯ ಮುಖಂಡರಾದ ಪ್ರಾಧಿಕಾರದ ಸದಸ್ಯ ಹರೀಶ್ ಕೆ., ಉಮೇಶ್ ಜೆ., ಜಯರಾಮ ಕೊಟ್ಟಾರಿ, ವೀರಪ್ಪ ಎಸ್., ಪ್ರಗತಿಪರ ಕೃಷಿಕ ರಮಾನಾಥ ಅತ್ತರ್(ಚಿತ್ತಣ್ಣ) ಮತ್ತಿತರರು ಉಪಸ್ಥಿತರಿದ್ದರು.



ಪಿಲಿಕುಳದ ಅರ್ಬನ್ ಹಾಥ್ ನಲ್ಲಿ ಹಣ್ಣುಗಳ ಉತ್ಸವ ಹಾಗೂ ಹಲಸು ಮೇಳವನ್ನು ಶಾಸಕ ಉಮಾನಾಥ ಕೋಟ್ಯಾನ್ ಉದ್ಘಾಟಿಸಿದರು. ಮೂಡುಶೆಡ್ಡೆ ಗ್ರಾಪಂ ಅಧ್ಯಕ್ಷೆ ಜಯಶ್ರೀ, ಉಪಾಧ್ಯಕ್ಷ ಅನಿಲ್‌ಕುಮಾರ್, ಸದಸ್ಯ ಸುನೀಲ್, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಅಭಿಷೇಕ್ ವಿ., ಪಿಲಿಕುಳ ಆಡಳಿತಾಧಿಕಾರಿ ಮನೀಶ್ ನಾಯ್ಕ್ ಇದ್ದರು.

**100ಕ್ಕೂ ಅಧಿಕ ಮಳಿಗೆ**

100ಕ್ಕೂ ಹೆಚ್ಚು ಹಣ್ಣು, ಗಿಡ, ಪುಸ್ತಕ ಮಳಿಗೆ ಹಾಗೂ ಇತರ ಗುಡಿ ಕೈಗಾರಿಕಾ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಸ್ಟಾಲ್‌ಗಳು ಮೇಳದಲ್ಲಿ ಒಳಗೊಂಡಿವೆ. ಮೇಳದೊಳಗೆ ಪ್ರವೇಶಿಸುತ್ತಿದ್ದಂತೆ ಹಲಸಿನ ಸುವಾಸನೆ ಮೂಗಿಗೆ ಬಡಿಯುವಂತಿದೆ. ಕೇಸರಿ ಹಲಸು, ಹಲಸು ಮತ್ತು ಮಾವಿನ ಕಸಿ ತಳಿಗಳ ಗಿಡಗಳು, ವಿಭಿನ್ನ ತಳಿಯ ಮಾವು ಹೆಚ್ಚಿನ ಗ್ರಾಹಕರ ಗಮನಸೆಳೆದಿವೆ. ರಾಂಬುಟನ್, ಡ್ರಾಗನ್ ಫ್ರೂಟ್ಸ್, ಹಲಸಿನ ಹಪ್ಪಳ, ಹಲಸಿನ ಪಟ್ಟಿರ್ ಮತ್ತು ಇತರ ಖಾದ್ಯ, ಉಪ್ಪಿನಕಾಯಿ, ಗಿಡಮೂಲಿಕೆ ಸೊತ್ತುಗಳು, ಪುಸ್ತಕ ಮಳಿಗೆ, ಕತ್ತಿ ಮತ್ತು ನಾರಿನ ಹೆಣೆದ ಗೃಹೋಪಯೋಗಿ ಪರಿಕರಗಳು, ಜೇನು ಮತ್ತಿತರ ಸೊತ್ತುಗಳು ಮಾರಾಟಕ್ಕಿಡಲಾಗಿದೆ.

ವಿಜಯವಾಣಿ ದಿನಪತ್ರಿಕೆ ದಿ.25/06/2023

---

## ಎರಡು ದಿನಗಳ ಉತ್ಸವಕ್ಕೆ ಚಾಲನೆ

# ಪಿಲಿಕುಳದಲ್ಲಿ ಗಮನಸೆಳೆದ 'ಹಣ್ಣುಗಳ ಉತ್ಸವ, ಹಲಸು ಮೇಳ'

**ಮಹಾನಗರ, ಜೂ.24:** ವಿವಿಧ ತಳಿಯ ಹಲಸಿನ ಹಣ್ಣು, ಮಾವಿನ ಹಣ್ಣು, ತರಹೇವಾರಿ ಖಾದ್ಯಗಳು, ಹಲಸಿನ ಹೋಳಿಗೆ, ಬಾಯಲ್ಲಿ ನೀರೂರಿಸುವ ಐಸ್ ಕ್ರೀಂ ಮುಂತಾದ ಖಾದ್ಯಗಳನ್ನು ಸವಿಯಲು ಪಿಲಿಕುಳದ ಅರ್ಬನ್ ಹಾಥ್‌ನಲ್ಲಿ ನಡೆಯುತ್ತಿರುವ 'ಹಣ್ಣುಗಳ ಉತ್ಸವ ಹಾಗೂ ಹಲಸು ಮೇಳ'ಕ್ಕೆ ಭೇಟಿ ನೀಡಬೇಕು.

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಿಂದ ಜೂ.24ರಿಂದ ಎರಡು ದಿನಗಳ ಕಾಲ ಹಣ್ಣುಗಳ ಉತ್ಸವ ಹಾಗೂ ಹಲಸು ಮೇಳ ಆಯೋಜಿಸಲಾಗಿದ್ದು, ಅನೇಕ ಮಂದಿ ಮೇಳಕ್ಕೆ ಭೇಟಿ ನೀಡುತ್ತಿದ್ದಾರೆ. ಹಲಸಿನಿಂದ ತಯಾರಿಸಿದ ಪಾಯಸ, ಹಲಸಿನ ಹಣ್ಣಿನ ಸೋಳೆ, ಕೊಟ್ಟಿಗೆ, ಹಲಸಿನ ಕಾಯಿಯ ಚಿಪ್ಸ್, ಗುಜ್ಜೆ ರೋಸ್ಟ್, ಹಲಸಿನ ಕಬಾಬು, ಪೋಡಿ, ಹಲಸಿನ ಹಪ್ಪಳ ಮುಂತಾದವು ಗ್ರಾಹಕರನ್ನು ಸೆಳೆಯುತ್ತಿದೆ.

ಮೇಳದಲ್ಲಿ ನಾನಾ ಬಗೆಯ ಐಸ್ ಕ್ರೀಂ ಇದ್ದು, ಕೈಲಾರ್ ನ್ಯಾಚುರಲ್‌ನಿಂದ ಬೊಂಡ, ಕಾಡು ಮಾವು, ಗಾಂಧಾರಿ ಮೆಣಸು, ಪುನಾರ್ಪುಳಿ, ನೇರಳೆ ಹಣ್ಣಿನ ಐಸ್ ಕ್ರೀಂ ಪ್ರೇಕ್ಷಕರನ್ನು ಆಕರ್ಷಿಸುತ್ತಿದೆ. ಮಂಗಳೂರಿನ ಚಿಗುರು ನರ್ಸರಿಯಿಂದ ವಿವಿಧ ತಳಿಯ ಹಲಸು ಗಿಡಗಳ ಮಾರಾಟ ಮತ್ತು ಗಣಸು,





ವಿವಿಧ ತರಕಾರಿ ಸಸಿಗಳು, ದೇಸಿ ತರಕಾರಿ ಬೀಜಗಳ ಮಾರಾಟಕ್ಕೆ ಇಡಲಾಗಿತ್ತು. ರಂಬೂಟನ್ ಸೇರಿದಂತೆ ತರಕಾರಿಗಳ ಮಾರಾಟವನ್ನೂ ಆಯೋಜಿಸಲಾಗಿದೆ.

**ಶಾಸಕರಿಂದ ಉದ್ಘಾಟನೆ**

ಹಣ್ಣುಗಳ ಉತ್ಸವ ಹಾಗೂ ಹಲಸು ಮೇಳಕ್ಕೆ ಶಾಸಕ ಉಮಾನಾಥ್ ಎ. ಕೋಟ್ಯಾನ್ ಅವರು ಚಾಲನೆ ನೀಡಿದರು. ಮೂಡುಶೆಡ್ಡೆ ಗ್ರಾ. ಪಂ. ನ ಅಧ್ಯಕ್ಷೆ ಜಯಶ್ರೀ, ಪಿಲಿಕುಳ ಆಯುಕ್ತ ಅಭಿಷೇಕ್ ಉಪಸ್ಥಿತರಿದ್ದರು. ಅರ್ಬನ್ ಹಾಥ್‌ನಲ್ಲಿನ ಮುಖ್ಯದ್ವಾರಗಳಲ್ಲಿ ಹೂವು ಮತ್ತು ತರಕಾರಿ, ಹಣ್ಣುಗಳಿಂದ ರಚಿಸಿದ ದೋಣಿಯಾಕಾರದ ಚಿತ್ತಾರ ಗಮನ ಸೆಳೆಯಿತು.

ಉದಯವಾಣಿ ದಿನಪತ್ರಿಕೆ ದಿ.25/06/2023